# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ –144ರ ವಾರ್ಡ್ ಸಭೆಯ ನಡವಳಿ

ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಸಿದ್ಧಾಪುರ ವಾರ್ಡ್–144 ರಲ್ಲಿ ವಾರ್ಡ್ ಸಭೆಯನ್ನು ಮಾನ್ಯ ಶ್ರೀ. ಪ್ರದೀಪ್‌ಕುಮಾರ್ ಎನ್., ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಕೆಂಪೇಗೌಡನಗರ ಉಪವಿಭಾಗ ಹಾಗೂ ನೋಡಲ್ ಅಧಿಕಾರಿ ಮತ್ತು ವಾರ್ಡ್ ಸಮಿತಿ ಅಧ್ಯಕ್ಷರ ಅಪ್ಪಣೆ ಮೇರೆಗೆ ದಿನಾಂಕ:16/07/2022 ರಂದು ಶನಿವಾರದಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ಕಮಿಟಿ ಸಭೆಯನ್ನು ಟಿ. ಮರಿಯಪ್ಪ ರಸ್ತೆಯಲ್ಲಿರುವ ವಾರ್ಡ್ ಕಛೇರಿ ಸಭಾಂಗಣದಲ್ಲಿ ಕರೆಯಲಾಗಿದ್ದು, ವಾರ್ಡ್ ಕುಂದು ಕೊರತೆಗಳ ಬಗ್ಗೆ ಚರ್ಚಿಸಲು ಅಧಿಕಾರಿಗಳಿಗೆ ಹಾಗೂ ಸಾರ್ವಜನಿಕರಿಗೆ ಆಹ್ವಾನ ನೀಡಿದ್ದು, ಸಭೆಯನ್ನು ನಡೆಸಲಾಯಿತು.

**ಹಾಜರಿದ್ದವರು:–**

1. ಶ್ರೀ. ಪ್ರದೀಪ್‌ಕುಮಾರ್ ಎನ್, ಸ.ಕಾ.ನಿ.ಅ (ಕೆ.ಗೌ.ನ) ಹಾಗೂ ನೋಡಲ್ ಅಧಿಕಾರಿ.
2. ಶ್ರೀ. ಆರ್. ಕೊಟ್ರೇಶ್ ನಾಯಕ್, ಸಹಾಯಕ ಅಭಿಯಂತರರು, ವಾರ್ಡ್–144.
3. ಶ್ರೀ. ರವೀಂದ್ರ ಹಿಜೇರಿ, ಹಿರಿಯ ಆರೋಗ್ಯ ಪರಿವೀಕ್ಷಕರು.
4. ಶ್ರೀಮತಿ. ಸುರೇಖ ಆರ್. ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್–144.
5. ಶ್ರೀ. ಎಂ.ಎಂ. ಬಾಬು ಕಂದಾಯ ಪರಿವೀಕ್ಷಕರು ವಾರ್ಡ್ –144.
6. ಶ್ರೀ. ಗೋಪಿನಾಥ್ ಎಸ್. ಕೆಲಸ ಪರಿವೀಕ್ಷಕರು, ಬೆಂ.ನೀ.ಸ. & ಒ. ಮಂಡಳಿ.
7. ಹಾಗೂ ಸಾರ್ವಜನಿಕರು.

*********

1. ಶ್ರೀ. ಜಯರಾಮಣ್ಣ ರವರು ಮಾತನಾಡಿ ವಾರ್ಡ್ ಪ್ರದೇಶದ ಕೆಲವೊಂದು ಸ್ಥಳದಲ್ಲಿ ಬೇಕಾಗಿರುವ ಸಿ.ಸಿ. ಕ್ಯಾಮರಾ ಅಳವಡಿಸಲು ಪೊಲೀಸ್ ಇಲಾಖೆಯ ವತಿಯಿಂದ ಸ್ಥಳ ಪರಿವೀಕ್ಷಣೆ ಮಾಡಿದ್ದು, ಇನ್ನೊಂದು ತಿಂಗಳಲ್ಲಿ ಸಿ.ಸಿ. ಕ್ಯಾಮರಾ ಅಳವಡಿಸುವುದಾಗಿ ತಿಳಿಸಿರುತ್ತಾರೆ ಎಂದು ವಾರ್ಡ್ ಸಭೆಯಲ್ಲಿ ತಿಳಿಸಿದರು. ಆದರೆ ಸದರಿ ಸಭೆಗೆ ಹಾಜರಾಗದೇ ಇರುವ ಪೊಲೀಸ್ ಇಲಾಖೆಯವರಿಗೆ ಸೂಚನಾ ಪತ್ರವನ್ನು ತಯಾರಿಸಿ ಸಲ್ಲಿಸುವಂತೆ ಹಾಗೂ ಮುಂದಿನ ಸಭೆಗಳಲ್ಲಿ ಕಡ್ಡಾಯವಾಗಿ ಸಭೆಗೆ ಹಾಜರಾಗುವಂತೆ ತಿಳಿಸಲು ಅಧ್ಯಕ್ಷರು ಸಹಾಯಕ ಅಭಿಯಂತರರಿಗೆ ತಿಳಿಸಿದರು.



Scanned with CamScanner

2. ಶ್ರೀ. ಸುರೇಶ್ ರವರು ಮಾತನಾಡಿ ಸೋಮೇಶ್ವರನಗರದ 8ನೇ ಅಡ್ಡರಸ್ತೆಯ ಎದುರು ನಿಮ್ಹಾನ್ಸ್‌ನಿಂದ ಬರುವ ಮಳೆನೀರು ಚರಂಡಿಯಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ವತಿಯಿಂದ ಸ್ಯಾನಿಟರಿ ಚೇಂಬರ್ ನಿರ್ಮಿಸಿದ್ದು, ಸದರಿ ಚೇಂಬರ್‌ನಿಂದ ಯಾವಾಗಲು ಚರಂಡಿ ನೀರು ಉಕ್ಕಿ ಹರಿದು ಮಳೆನೀರು ಚರಂಡಿಯ ಮುಖಾಂತರ ದಯಾನಂದ ಸ್ಲಂನಲ್ಲಿ ಹರಿದು ಹೋಗುವ ಕಾರಣ ಅಲ್ಲಿನ ಸ್ಥಳೀಯರಿಗೆ ತೊಂದರೆಯಾಗುತ್ತದೆ ಎಂದು ಸಭೆಯಲ್ಲಿ ದೂರಿದರು. ಅದರನ್ವಯ ಅಧ್ಯಕ್ಷರು ಮಾತನಾಡಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಅಭಿಯಂತರರು ಸಭೆಗೆ ಹಾಜರಾಗದೇ ಇರುವ ಕಾರಣ ಸಭೆಯಲ್ಲಿ ಹಾಜರಿದ್ದ ಕೆಲಸ ಪರಿವೀಕ್ಷಕರಿಗೆ ಈ ಬಗ್ಗೆ ಕೂಡಲೇ ಕ್ರಮ ಕೈಗೊಂಡು, ಕೈಗೊಂಡಿರುವ ಕ್ರಮದ ಬಗ್ಗೆ ಮುಂದಿನ ಸಭೆಗೆ ವರದಿ ಸಲ್ಲಿಸಲು ಸೂಚಿಸಿದರು.

3. ಶ್ರೀ. ಸುರೇಶ್ ರವರು ಮಾತನಾಡಿ ವಾರ್ಡ್ ಪ್ರದೇಶದಲ್ಲಿ ಸಿ.ಸಿ. ಕ್ಯಾಮರಾದ ಕೇಬಲ್‌ಗಳನ್ನು ಸರಿಪಡಿಸಲು, ಸೋಮೇಶ್ವರನಗರ ಮುಖ್ಯರಸ್ತೆಯ ದುರಸ್ಥಿಯಾಗಿರುವ ಕಲ್ವರ್ಟ್‌ಗಳನ್ನು ಸರಿಪಡಿಸಲು, ವಾರ್ಡಿನಲ್ಲಿರುವ ಬೋರ್‌ವೆಲ್‌ಗಳ ವಿವರಗಳನ್ನು ನೀಡಲು, ಬೆಸ್ಕಾಂ ಇಲಾಖೆಯವರು ವಾರ್ಡ್ ಪ್ರದೇಶದ ಜಂಕ್ಷನ್‌ಗಳಲ್ಲಿ ಟ್ರಾನ್ಸ್‌ಫಾರ್ಮರ್‌ನ ಸಿಂಗಲ್ ಪೋಲ್ ಅಳವಡಿಸಲು ಕೋರಿದರು. ಈ ಎಲ್ಲಾ ಮೇಲಿನ ಅಂಶಗಳನ್ನು ಅವಲೋಕಿಸಿ ಅಧ್ಯಕ್ಷರು ಆಯಾ ಇಲಾಖೆಯ ಅಧಿಕಾರಿಗಳು ತಿಳಿಸುವುದಾಗಿ ಸಭೆಯಲ್ಲಿ ತಿಳಿಸಿದರು.

4. ಶ್ರೀ. ಟಿ. ಮಂಜುನಾಥ ರವರು ಮಾತನಾಡಿ ಗುಟ್ಟೇಪಾಳ್ಯದಲ್ಲಿ ಬೇಕಾಗಿರುವ ಸ್ಥಳಗಳಲ್ಲಿ ಸಿ.ಸಿ. ಕ್ಯಾಮರಾವನ್ನು ಅಳವಡಿಸಲು ಕೋರಿದರು. ಹಾಗೂ ಮಲ್ಲಿಗೆ ಆಸ್ಪತ್ರೆ ಆವರಣದ ಮುಂಭಾಗದಲ್ಲಿ ಹೊಸದಾಗಿ ಅಮುಧಾ ಹೋಟೆಲ್ ನಿರ್ಮಿಸಿರುವುದರಿಂದ ಹೋಟೆಲ್‌ಗೆ ಬರುವ ಸಾರ್ವಜನಿಕರ ವಾಹನಗಳು ರಸ್ತೆಯಲ್ಲಿಯೇ ನಿಲ್ಲಿಸುವುದರಿಂದ ತೊಂದರೆಯಾಗಿರುತ್ತದೆಂದು ದೂರಿದರು. ಇದರನ್ವಯ ಅಧ್ಯಕ್ಷರು ಮಾತನಾಡಿ ಸಂಬಂಧಪಟ್ಟ ಇಲಾಖೆಯವರಿಗೆ ತಿಳಿಸಿ ಕ್ರಮ ವಹಿಸಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

5. ಶ್ರೀ. ಸುರೇಶ್ ಎಸ್.ಎಂ ರವರು ಮಾತನಾಡಿ ಯಲ್ಲಮ್ಮ ದೇವಸ್ಥಾನದ ಹತ್ತಿರ ಬಾಕಿ ಇರುವ ಆರ್.ಸಿ.ಸಿ ಚರಂಡಿಯನ್ನು ನಿರ್ಮಿಸಿಕೊಡುವಂತೆ ಕೋರಿದರು. ಇದರನ್ವಯ ಅಧ್ಯಕ್ಷರು ಮಾತನಾಡಿ ಸಹಾಯಕ ಅಭಿಯಂತರರಿಗೆ ಕ್ರಮ ಕೈಗೊಳ್ಳುವಂತೆ ತಿಳಿಸಿದರು.



Scanned with CamScanner

6. ಶ್ರೀ. ಸುಮಂತ್ ರವರು ಮಾತನಾಡಿ ಪಾಲಿಕೆಯ ವತಿಯಿಂದ ಕಸದ ವಾಹನಗಳೂ ಸರಿಯಾದ ವೇಳೆಗೆ ಸಿದ್ದಾಪುರ ಗ್ರಾಮಕ್ಕೆ ಬರುತ್ತಿಲ್ಲವೆಂದು ದೂರಿದರು ಹಾಗೂ ದೇವಸ್ಥಾನದ ಹತ್ತಿರ ಹಾಕಿರುವ ಸಿ.ಸಿ. ಕ್ಯಾಮರದ ಅಲೈನ್‌ಮೆಂಟ್ ಬದಲಾವಣೆ ಮಾಡಲು ಕೋರಿದರು. ಇದರನ್ವಯ ಮಾತನಾಡಿ ಸಂಬಂಧಪಟ್ಟ ಕಿರಿಯ ಆರೋಗ್ಯ ಪರಿವೀಕ್ಷಕರು ಹಾಗೂ ಸಹಾಯಕ ಅಭಿಯಂತರರಿಗೆ ಸರಿಪಡಿಸಲು ಹೇಳಿದರು.

7. ಶ್ರೀ. ಅಶೋಕ್ ಜಿ. ರವರು ಮಾತನಾಡಿ ಸಿದ್ದಾಪುರ ಸರ್ಕಲ್ ಎಡ ಮತ್ತು ಬಲಭಾಗದಲ್ಲಿರುವ ಪಾರ್ಕ್‌ಗಳನ್ನು ಅಭಿವೃದ್ಧಿಪಡಿಸಲು ಹಾಗೂ ಪಳೇಕಮ್ಮ ದೇವಸ್ಥಾನದ ಹತ್ತಿರವಿರುವ ಖಾಲಿ ಜಾಗದ ವಿವರಗಳನ್ನು ನೀಡಲು ಕೇಳಿದರು. ಇದರನ್ವಯ ಅಧ್ಯಕ್ಷರು ಮಾತನಾಡಿ ಸಂಬಂಧಪಟ್ಟ ಸಹಾಯಕ ಅಭಿಯಂತರರು ಹಾಗು ಕಂದಾಯ ಇಲಾಖೆಯ ಶ್ರೀ.ಎಂ.ಎಂ. ಬಾಬು ರವರಿಗೆ ಮುಂದಿನ ಸಭೆಯಲ್ಲಿ ವಿವರಗಳನ್ನು ನೀಡಲು ತಿಳಿಸಿದರು.

8. ಶ್ರೀ. ಅಜ್ಮಲ್ ರವರು ಮಾತನಾಡಿ ವಾಂಬೆ ಕ್ವಾಟ್ರಸ್ ಹತ್ತಿರವಿರುವ ದೊಡ್ಡ ಮಳೆನೀರು ಚರಂಡಿಯ ಮೇಲೆ ತುಂಬಾ ಕಸ ಹಾಗೂ ಮಣ್ಣನ್ನು ತೆರವುಗೊಳಿಸಲು ಹಾಗೂ ವಾರ್ಡ್ ಪ್ರದೇಶದಲ್ಲಿ ಬೆಂಗಳೂರು ನೀರು ಸರಬರಾರು ಮತ್ತು ಒಳಚರಂಡಿ ಮಂಡಳಿಯ ಮ್ಯಾನ್ ಹೋಲ್‌ಗಳನ್ನು ರಸ್ತೆ ಮಟ್ಟಕ್ಕೆ ಕಲ್ಪಿಸಲು ಕೋರಿದರು. ಇದರನ್ವಯ ಅಧ್ಯಕ್ಷರು ಮಾತನಾಡಿ ವಾಂಬೆ ಕ್ವಾಟ್ರಸ್ ಹತ್ತಿರವಿರುವ ಕಸ ಮತ್ತು ಮಣ್ಣನ್ನು ತೆರವುಗೊಳಿಸಲು ದಿ:22-07-2022 ರಂದು ಸಾಮೂಹಿಕ ಸ್ವಚ್ಛತಾ ಕಾರ್ಯವನ್ನು ಏರ್ಪಡಿಸಿ ಸ್ವಚ್ಛಗೊಳಿಸಲು ತಿಳಿಸಿದರು. ಹಾಗೂ ಒಳಚರಂಡಿ ಮತ್ತು ಮ್ಯಾನ್‌ಹೋಲ್‌ಗಳನ್ನು ರಸ್ತೆ ಮಟ್ಟಕ್ಕೆ ತರಲು ಸದರಿ ಇಲಾಖೆಯ ಹಾಜರಿದ್ದ ಕೆಲಸ ಪರಿವೀಕ್ಷಕರಿಗೆ ಸೂಚಿಸಿದರು.

9. ಪಾಲಿಕೆಯ ಕಿರಿಯ ಆರೋಗ್ಯ ಪರಿವೀಕ್ಷಕರಾದ ಶ್ರೀಮತಿ. ಸುರೇಖ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಸಾರ್ವಜನಿಕರು ಕಸವನ್ನು ಬೇರ್ಪಡಿಸಿ ನೀಡದೆ ಇರುವ ಕಾರಣ ತುಂಬಾ ತೊಂದರೆಯಾಗಿದ್ದು, ಹಾಗೂ ಕಸವನ್ನು ಎಲ್ಲೆಂದರಲ್ಲಿ ಹಾಕುವುದು ಇದಕ್ಕೆ ಪಾಲಿಕೆಯ ವತಿಯಿಂದ ದಂಡ ವಿಧಿಸುವ ಸಮಯದಲ್ಲಿ ಕೆಲವು ಗಣ್ಯ ವ್ಯಕ್ತಿಗಳು ದಂಡವನ್ನು ತೆಗೆದುಕೊಳ್ಳಬಾರದೆಂದು ಪ್ರತಿಭಟಿಸುತ್ತಾರೆ ಎಂದು ಸಭೆಯಲ್ಲಿ ತೊಂದರೆಯನ್ನು ವ್ಯಕ್ತ ಪಡಿಸಿದರು. ಅಧ್ಯಕ್ಷರು ಮಾತನಾಡಿ ಪಾಲಿಕೆಯ ಕಾನೂನನ್ನು ಪಾಲಿಸಲು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ನಿರ್ದೇಶನ ನೀಡಿದರು.



Scanned with CamScanner

ಮೇಲಿನ ಈ ಎಲ್ಲಾ ಚಟುವಟಿಕೆಗಳನ್ನು ಕ್ರಮಬದ್ಧವಾಗಿ ನಿರ್ವಹಿಸಲು ಎಲ್ಲಾ ಸಿಬ್ಬಂಧಿ ವರ್ಗದವರು ಒಂದುಗೂಡಿ ಈ ಕಾರ್ಯದಲ್ಲಿ ಪಾಲ್ಗೊಂಡು ಮಾನ್ಯ ಆಯುಕ್ತರು (ಬಿಬಿಎಂಪಿ) ರವರು ವಹಿಸಿರುವ ಜವಾಬ್ಧಾರಿಯನ್ನು ಯಶಸ್ವಿಯಾಗಿ ನಿರ್ವಹಿಸಲು ಎಲ್ಲರೂ ಸಹಕರಿಸಬೇಕೆಂದು ಹೇಳುತ್ತಾ ಸಭೆ ಮುಕ್ತಾಯಗೊಳಿಸಿದರು.

AE 16/7/22

ಕಾರ್ಯದರ್ಶಿ & ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ – 144
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

16/7/22

ಅಧ್ಯಕ್ಷರು & ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ – 144
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ



Scanned with CamScanner